**ಕರ್ನಾಟಕ ಸರ್ಕಾರ**

**ಸಮಾಜ ಕಲ್ಯಾಣ ಇಲಾಖೆ**

ಸಂಖ್ಯೆ:ಸಕಇ/ಪಪೂತಕೇ/ಎಸ್-4/ಸಿಆರ್-15/2021-22

ಮುಖ್ಯ ಅಡಳತಾಧಿಕಾರಿಗಳ ಕಛೇರಿ,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಡಾ.ಬಿ.ಆರ್.ಅಂಬೇಡ್ಕರ್ ಭವನ,
ಬೆಂಗಳೂರು, ದಿನಾಂಕ: 21-12-2021.

**"ಅಧಿಸೂಚನೆ"**

ವಿಷಯ : 2021-22ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಅಭ್ಯರ್ಥಿಗಳನ್ನು ವಿವಿಧ ತರಬೇತಿ ಸಂಸ್ಥೆಗಳಲ್ಲಿ ಗ್ರೂಪ್-ಸಿ/ಬ್ಯಾಂಕಿಂಗ್/ಎಸ್.ಎಸ್.ಸಿ ಮತ್ತು ಆರ್.ಆರ್.ಬಿ ಪರೀಕ್ಷೆಗಳ ಪೂರ್ವಭಾವಿ ತರಬೇತಿಗಾಗಿ ಅಭ್ಯರ್ಥಿಗಳ ಆಯ್ಕೆಗಾಗಿ ಮೂಲ ದಾಖಲಾತಿಯನ್ನು ಪರಿಶೀಲನೆಗೆ ಹಾಜರು ಪಡಿಸುವ ಬಗ್ಗೆ.

****

2021-22ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು ಮೂಲಕ ಪರಿಶಿಷ್ಟ ಜಾತಿ/ಪಂಗಡಗಳ ಅಭ್ಯರ್ಥಿಗಳನ್ನು ವಿವಿಧ ತರಬೇತಿ ಸಂಸ್ಥೆಗಳಲ್ಲಿ ಗ್ರೂಪ್-ಸಿ & ಎಸ್.ಎಸ್.ಸಿ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿಗೆ ನಿಯೋಜಿಸುವ ಸಂಬಂಧ ದಿನಾಂಕ: **23/12/2021** ಮತ್ತು ಬ್ಯಾಂಕಿಂಗ್ & ಆರ್.ಆರ್.ಬಿ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿಗೆ ನಿಯೋಜಿಸುವ ಸಂಬಂಧ, ದಿನಾಂಕ: **24/12/2021** ರಂದು ಅರ್ಹ ಅಭ್ಯರ್ಥಿಗಳಿಂದ ಮೂಲದಾಖಲಾತಿ ಪರಿಶೀಲನೆಗೆ ಹಾಗೂ ಕೌನ್ಸಿಲಿಂಗ್‌ಗೆ ಆಹ್ವಾನಿಸಲಾಗಿದೆ. ಕೌನ್ಸಿಲಿಂಗ್‌ಗೆ ಹಾಜರಾಗಬೇಕಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಸಿದ್ದಪಡಿಸಿ ಇಲಾಖಾ ವೆಬ್‌ಸೈಟ್ **www.sw.kar.nic.in** ನಲ್ಲಿ ಅಳವಡಿಸಲಾಗಿದೆ.

**ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಹಾಜರುಪಡಿಸಬೇಕಾದ ಮೂಲ ದಾಖಲಾತಿಗಳ ವಿವರ**

1. 10ನೇ ತರಗತಿ ಮೂಲ ಅಂಕಪಟ್ಟಿ,
2. ಪದವಿ ಪ್ರಮಾಣ ಪತ್ರ,
3. ಆಧಾರ್ ಕಾರ್ಡ್,
4. ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ.
5. ಸರ್ಕಾರಿ ಹಾಸ್ಟಲ್‌ನ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳು ಕಡ್ಡಾಯವಾಗಿ 3 ವರ್ಷಗಳು ಸರ್ಕಾರಿ ಹಾಸ್ಟೆಲ್‌ನಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧ ಪಟ್ಟ ಹಾಸ್ಟೆಲ್‌ನ ವಾರ್ಡನ್‌ರಿಂದ

ದೃಢೀಕರಣ ಪತ್ರ ಪಡೆದು ಮೂಲ ದೃಢೀಕರಣ ಪತ್ರವನ್ನು ಕೌನ್ಸಿಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಹಾಜರು ಪಡಿಸುವುದು, ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು.

6. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ (ಕ್ರೈಸ್) ವ್ಯಾಸಂಗ ಮಾಡಿರುವ ಸಂಬಂಧ ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಕಡ್ಡಾಯವಾಗಿ 5 ವರ್ಷಗಳು ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧ ಪಟ್ಟ ವಸತಿ ಶಾಲೆಯ ಪ್ರಾಂಶುಪಾಲರಿಂದ ದೃಢೀಕರಣ ಪತ್ರ ಪಡೆದು ಕೌನ್ಸಿಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಹಾಜರು ಪಡಿಸುವುದು, ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
7. ಹಾಸ್ಟೆಲ್ / ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ಸಂಬಂಧ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ಸಲ್ಲಿಸುವ ದೃಢೀಕರಣ ಪತ್ರವನ್ನು ಇಲಾಖಾವತಿಯಿಂದ ಮರು ಪರಿಶೀಲಿಸಿ ಖಚಿತ ಪಡಿಸಿಕೊಂಡ ನಂತರವೇ ಅಭ್ಯರ್ಥಿಗಳಿಗೆ ಆಯ್ಕೆಯನ್ನು ಅಂತಿಮಗೊಳಿಸಲಾಗುತ್ತದೆ.
8. ವಿಶೇಷಚೇತನ (ಅಂಗವಿಕಲ) ಅಭ್ಯರ್ಥಿಗಳು ವಿಶೇಷಚೇತನ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.
9. ಸಫಾಯಿ ಕರ್ಮಚಾರಿ ಪ್ರಮಾಣ ಪತ್ರ.
10. 4 ಭಾವಚಿತ್ರ.

**ಕೌನ್ಸಿಲಿಂಗ್ ಪ್ರಕ್ರಿಯೆ**

- ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಅಂಗವಿಕಲರಿಗೆ ಮೊದಲು ಆದ್ಯತೆ ಮೇಲೆ ತರಬೇತಿ ಸಂಸ್ಥೆಗಳ ಆಯ್ಕೆಗೆ ಅವಕಾಶ ನೀಡಲಾಗುವುದು. ಉಳಿದಂತೆ, ಪ್ರವೇಶ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
- ಅಭ್ಯರ್ಥಿಗಳ ಆಯ್ಕೆಯು ಪ್ರವೇಶ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಮೆರಿಟ್ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ.
- ಕೌನ್ಸಿಲಿಂಗ್‌ಗೆ ನಿಗದಿಪಡಿಸಿದ ದಿನಾಂಕ ಮತ್ತು ಸಮಯಕ್ಕೆ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಅಭ್ಯರ್ಥಿಗಳಿಗೆ ಒಂದೇ ಅವಕಾಶ ನೀಡಲಾಗುವುದು.
- ಒಂದು ಬಾರಿ ತರಬೇತಿ ಸಂಸ್ಥೆ ಆಯ್ಕೆ ಮಾಡಿದ ನಂತರ ತರಬೇತಿ ಸಂಸ್ಥೆಯ ಬದಲಾವಣೆಗೆ ಯಾವುದೇ ಅವಕಾಶವಿರುವುದಿಲ್ಲ.

**<u>ಶಿಷ್ಯವೇತನ:-</u>**

<table>
<tr><th rowspan="2">ಕ್ರ.ಸಂ.</th><th rowspan="2">ತರಬೇತಿ ವಿವರ</th><th rowspan="2">ತರಬೇತಿ ನಡೆಯುವ ಸ್ಥಳ</th><th colspan="3">ಶಿಷ್ಯವೇತನ</th></tr>
<tr><th colspan="2">ಆಫ್‌ಲೈನ್ ತರಬೇತಿ</th><th>ಆನ್‌ಲೈನ್ ತರಬೇತಿ</th></tr>
<tr><td rowspan="2">1</td><td rowspan="2">ಗ್ರೂಪ್-ಸಿ / ಬ್ಯಾಂಕಿಂಗ್ / ಎಸ್.ಎಸ್.ಸಿ ಮತ್ತು ಆರ್.ಆರ್.ಬಿ</td><td rowspan="2">ಬೆಂಗಳೂರು, ಧಾರವಾಡ, ದಾವಣಗೆರೆ, ಕಲ್ಬುರ್ಗಿ, ವಿಜಯಪುರ, ಬೆಳಗಾವಿ</td><td>ಹೊರ ಜಿಲ್ಲೆಯ ಅಭ್ಯರ್ಥಿಗಳಗೆ</td><td>ಸ್ಥಳೀಯ ಅಭ್ಯರ್ಥಿಗಳಗೆ</td><td rowspan="2">2,500</td></tr>
<tr><td>5,000</td><td>4,000</td></tr>
</table>

ಸಹಿ/-
ಮುಖ್ಯ ಅಡಳಿತಾಧಿಕಾರಿಗಳು,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಬೆಂಗಳೂರು.